# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗ್ಪುರ್, ಮಹಾರಾಷ್ಟ್ರ

[ಭಾರತೀಯ ಕೃಷಿ ಅನುಸಂಧಾನ ಪರಿಷದ್ (ಭಾ. ಕೃ. ಅ. ಪ.), ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ]

## ಹತ್ತಿ ಬೆಳೆಯಲು ಸಾಪ್ತಾಹಿಕ ಸಲಹೆ, ಜೂಲೈ 9 ರಿಂದ 14 , 2019 ರವರೆಗೆ

### ಹವಾಮಾನ ಸಲಹೆ

| | ಜೂಲೈ ತಿಂಗಳಿನ ವಾಸ್ತವಿಕ ಮಳೆಯ ಪ್ರಮಾಣ (IMD ಆಧಾರಿತ) | | | | | ಜೂಲೈ ತಿಂಗಳಿನಲ್ಲಿ ಮುನ್ಸೂಚನೆಯ ಮಳೆಯ ಪ್ರಮಾಣ (IMD ಆಧಾರಿತ) | | | | | | ಸಲಹೆ |
|---|---|---|---|---|---|---|---|---|---|---|---|---|
| ದಿನಾಂಕ | 4 | 5 | 6 | 7 | 8 | 9 | 10 | 11 | 12 | 13 | 14 | |
| | ಕರ್ನಾಟಕ | | | | | | | | | | | |
| ಧಾರವಾಡ | 7.2 | | | | | 6 | 10 | 9 | 15 | 7 | 17 | ಜೂನ್ ಕೊನೆಯ ವಾರದಲ್ಲಿ ಬಿಟಿ ಹತ್ತಿಯ ಬಿತ್ತನೆಯು ಆರಂಭಗೊಂಡು, ಈವರೆಗೂ ಮುಂದುವರಿದಿದೆ. ಮುಂಗಡ ಬಿತ್ತನೆ ಮಾಡಿದ ಪ್ರದೇಶಗಳಲ್ಲಿ 10 ರಿಂದ 15 ದಿನಗಳಾಗಿದ್ದು, ಬೆಳೆಯು ಮೊಳಕೆಹೊಡೆಯುವ ಹಂತದಲ್ಲಿದೆ. ಈ ವಾರದ ವರದಿಯ ಪ್ರಕಾರ ಹತ್ತಿ ಬೆಳೆಯುವ ಎಲ್ಲಾ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣವಿದ್ದು ಚಿಮುಕಿಸುವ ಮಳೆ ಆಗುವ ಸಾಧ್ಯತೆ ಇದೆ.ಹತ್ತಿ ಬೆಳೆಯುವ ಕ್ಷೇತ್ರಗಳಲ್ಲಿ ಏಕದಳ ಕಳೆಗಳ ಪ್ರಾಬಲ್ಯ ಕಂಡುಬಂದ ಕಾರಣ ಅವುಗಳನ್ನು ಪೂರ್ವಭಾವಿ ಕಳೆನಾಶಕಗಳ ಸಿಂಪಡನೆಯಿಂದ ನಿಯಂತ್ರಿಸಲಾಗುತ್ತಿದೆ. ಈ ಕ್ಷೇತ್ರಗಳಲ್ಲಿ ರೆಂಬೆ ಮೂತಿ ಹುಳುವಿನ ಸಮಸ್ಯೆ ಕಂಡುಬಂದಿದೆ. ಪ್ರತಿ 20 ಸಾಲು ಬಿಟಿ ಹತ್ತಿಗೆ ಒಂದು ಸಾಲು ಬೆಂಡೆಕಾಯಿ ಬೀಜಗಳನ್ನು ಬಿತ್ತಲಾಗುತ್ತಿದೆ. ಈ ಕ್ಷೇತ್ರಗಳಲ್ಲಿ ಯಾವುದೇ ಸಸ್ಯರೋಗಗಳ ಸಮಸ್ಯೆ ಕಾಣಿಸಿಕೊಂಡಿಲ್ಲ. ಚಾಮರಾಜನಗರದಲ್ಲಿ ಬೆಳೆಯು ಮೊಳಕೆ ಹೊಡೆಯುವ ಹಂತ ಕಳೆದು ಸಸ್ಯಕ ಹಂತದಲ್ಲಿದೆ. ಕಳೆ ನಿವಾರಣೆ, ಕಳೆ ನಾಶಕಗಳ ಸಿಂಪಡನೆ ಮತ್ತು ಸಾಲು ಎತ್ತುವಿಕೆ ಅಂತಹ ಕೆಲಸಗಳು ನಡೆಯುತ್ತಿವೆ . ಗರಿಕೆ, ತುಂಗೆ, ಕಾಂಗ್ರೆಸ್ ಕಳೆ ಹಾಗೂ ಇತರ ಅಗಲವಾದ ಎಲೆಗಳುಳ್ಳ ಕಳೆಗಳು ಹೊಲಗಳಲ್ಲಿ ಆವರಿಸಿವೆ. ರಸಹೀರುವ ಕೀಟಗಳಾದ ಸಸ್ಯ ಹೇನು,ಬಿಳಿ ನೊಣ ಹಾಗೂ ಜಿಗಿ ಹುಳುಗಳ ಸಮಸ್ಯೆ ಆರ್ಥಿಕ ಮಿತಿ |
| ಹಾವೇರಿ | | | | | | 5 | 6 | 5 | 18 | 3 | 16 | |
| ಮೈಸೂರ್ | 0 | | | | | 7 | 10 | 12 | 5 | 4 | 6 | |

| | | | | | | | | | | | | |
|---|---|---|---|---|---|---|---|---|---|---|---|---|
| | | | | | | | | | | | | ಮಟ್ಟಕ್ಕಿಂತ ಕಡಿಮೆ ಇದೆ. ಬೆಳೆಯು ತೇವಾಂಶದ ಒತ್ತಡದಿಂದ ಬಳಲುತ್ತಿದೆ .<br>**ಸಲಹೆ:**<br>25 ಕೆಜಿ ಯೂರಿಯಾ ಮತ್ತು 25 ಕೆಜಿ ಮುರಿಯೇಟ್ ಆಫ್ ಪೊಟ್ಯಾಶ್ ಅನ್ನು ಬೆಳೆಗೆ ಹಾಕಲು ಶಿಫಾರಸ್ಸು ಮಾಡಲಾಗಿದೆ. |

| **ಮಳೆಯ ಮಾಹಿತಿಯ ಮಾದರಿ** | | | | | | ಮಳೆಯ ಮಾಹಿತಿಯ ಮೂಲ |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | < 5 | 5-20 | 21-50 | 51-80 | > 80 | http://imdagrimet.gov.in (ಜೂಲೈ 1, 2019) |

0. 0 ಮಿ.ಮೀ : ಮಳೆ ಇಲ್ಲ

ಖಾಲಿ ಇರುವ ಕೋಶ : ಮಳೆಯ ಮಾಹಿತಿ ಲಭ್ಯವಿಲ್ಲ

**ಕನ್ನಡ ಅನುವಾದ:**

ಡಾ. ಎನ್. ಚಂದ್ರಶೇಖರ್

ಡಾ. ಸವಿತಾ ಸಂತೋಷ್

(ಕೃಷಿ ವಿಜ್ಞಾನಿಗಳು, ಸಿ.ಐ.ಸಿ.ಆರ್, ನಾಗ್ಪುರ್, ಮಹಾರಾಷ್ಟ್ರ)